ಸಿ.ಆರ್.ಪಿ.67

ಕರ್ನಾಟಕ ಸರ್ಕಾರ

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂ.37<br>ನಮೂನೆ ಸಂ. 4<br>(ಸಿವಿಲ್) |

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಹೆಚ್ಚುವರಿ ಮೋಟಾರು ವಾಹನ ಅಪಘಾತ ಪರಿಹಾರ ಮಂಡಳಿ, ಕುಂದಾಪುರ**

**ಎಂ.ವಿ.ಸಿ. : 684/2020 ಪಿ.ಡಬ್ಲ್ಯೂ : 1**

**ದಿ : 17-06-2022 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** : ಶ್ರೀ ಹೆಚ್.ಆರ್.ಎಸ್ ವಕೀಲರಿಂದ :

ನಾನು ಸಹಿ ಮಾಡಿದ ಸಾಕ್ಷಿ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳೆಲ್ಲ ಸತ್ಯವಾಗಿದೆ. ಪ್ರಮಾಣಪತ್ರ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ .

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಹಾಜರುಪಡಿಸಿದ ದಾಖಲಾತಿಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

ನಿ.ಪಿ - 1 - ಅಪರಾಧ ಸಂಖ್ಯೆ 1/2020 ರ ಪ್ರಥಮ ವರ್ತಮಾನ ವರದಿಯ ನಕಲು

ನಿ.ಪಿ - 2 - ದೂರಿನ ನಕಲು

ನಿ.ಪಿ - 3 - ದಿನಾಂಕ 03-01-2020 ರ ಪೋಲೀಸರಿಗೆ ನೀಡಿದ ಹೆಚ್ಚುವರಿ ಹೇಳಿಕೆ

ನಿ.ಪಿ - 4 - ಅಂತಿಮ ದೋಷಾರೋಪಣ ಪತ್ರದ ನಕಲು

ನಿ.ಪಿ - 5 - ಪಂಚನಾಮೆಯ ನಕಲು

ನಿ.ಪಿ - 6 – ಮೃತ ವಿನೋದ್ ಸೈಮನ್ ರವರ ಶವ ತನಿಖಾ ವರದಿ

ನಿ.ಪಿ - 7 - ಮೃತ ವಿನೋದ್ ಸೈಮನ್ ರವರ ಶವ ಪರೀಕ್ಷಾ ವರದಿ

ನಿ.ಪಿ - 8 – ಅಪಘಾತ ವರದಿ ನಮೂನೆ

ನಿ.ಪಿ - 9 - ಎ.ಐ.ಆರ್ ವರದಿಯ ನಕಲು

ನಿ.ಪಿ - 10 ಮತ್ತು 11 – ನನ್ನ ಮತ್ತು ನನ್ನ ತಾಯಿಯ ಆಧಾರ್ ಕಾರ್ಡಿನ ನಕಲು

ನಿ.ಪಿ - 12 - ದಿನಾಂಕ 25-06-2020 ರಂದು ಪಂಚಾಯಿತಿಯವರು ನೀಡಿರುವ ವಾಸಸ್ಥಳ

ನಿ.ಪಿ - 13 – ನನ್ನ ತಂದೆಯ ಮರಣ ಪ್ರಮಾಣ ಪತ್ರ

ನಿ.ಪಿ - 14 – ನನ್ನ ತಂದೆಯ ವರ್ಗಾವಣೆ ಪ್ರಮಾಣ ಪತ್ರ

ನಿ.ಪಿ - 15 – ನನ್ನ ತಂದೆಗೆ ಸೇರಿದ ಪಾಸ್ ಪೋರ್ಟ್

ಈ ಹಂತದಲ್ಲಿ ವೆಲ್ತ್ ಪ್ಲ್ಯಾನೆಟ್ ಕೋ. ಮೃತ ವಿನೋದ್ ಸೈಮನ್ ರವರಿಗೆ ಸಂಬಳ ಪಡೆಯುತ್ತಿದ್ದ ಬಗ್ಗೆ ಹಾಗೂ ನೌಕರಿ ಆದೇಶ ನೀಡಿರುವ ತಾರೀಕು 10-08-2008 ರ ದಾಖಲೆಗಳನ್ನು ನಿಶಾನೆಗಳಾಗಿ ಅವಕಾಶ ಇರುವುದಿಲ್ಲ ಎಂದು 2 ನೇ ಎದುರುದಾರ ಪರ ಶ್ರೀ ಎನ್.ವಿ.ಆರ್ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಈ ಸಂಬಂಧ ಅರ್ಜಿದಾರರ ಪರ ಶ್ರೀ ಹೆಚ್.ಆರ್.ಎಸ್ ವಕೀಲರು, ಕಂಪನಿಯ ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದು, ಗುರುತಿಸಲು ಯಾವುದೇ ಅಡೆತಡೆ ಇರುವುದಿಲ್ಲ ಎಂದು ನ್ಯಾಯಾಲಯಕ್ಕೆ ನಿವೇದಿಸಿರುತ್ತಾರೆ. ಮುಂದುವರಿದು ಎದುರುದಾರರ ಪರ ವಕೀಲರು ಹೇಗೆ ದಾಖಲೆಗಳು ಅರ್ಜಿದಾರರ ವಶಕ್ಕೆ ಬಂದ ಸಂಬಂಧ ವಿವರಣೆ ಇಲ್ಲ, ಹಾಗಾಗಿ ಗುರುತಿಸಲು ಆಗುವುದಿಲ್ಲ ಎಂದು ವಾದಿಸಿರುತ್ತಾರೆ. ಉಭಯೇತರರ ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ</u>**

ಪ್ರಸ್ತುತ ಹಾಜರುಪಡಿಸಿರುವ ದಾಖಲೆಗಳು ಮೃತ ಕೆಲಸ ಮಾಡುತ್ತಿದ್ದರು ಎನ್ನುವ ಕಂಪನಿಯ ಮೊಹರು ಮತ್ತು ಸಹಿಗಳನ್ನು ಒಳಗೊಂಡಿರುತ್ತದೆ. ಸದರಿ ದಾಖಲೆಗಳು ಅರ್ಜಿದಾರರ ವಶಕ್ಕೆ ಹೇಗೆ ಬಂದಿವೆ ಮತ್ತು ಯಾವ ಸ್ವರೂಪದ ದಾಖಲೆಗಳು ಎಂಬ ಬಗ್ಗೆ ಪಾಟೀ ಸವಾಲಿನಲ್ಲಿ ಅವುಗಳ ನೈಜತೆ ಹೊರತರುವ ಹಕ್ಕು ಮೀಸಲಿರುತ್ತದೆ. ಹಾಗಾಗಿ ಸದರಿ ದಾಖಲೆಗಳನ್ನು ಗುರುತಿಸಲು ಅನುಮತಿಸಿದೆ.

ಹಾಗಾಗಿ ಸದರಿ ದಾಖಲೆಗಳನ್ನು ನಿ.ಪಿ - 16 ಮತ್ತು 17 ಎಂದು ಕ್ರಮವಾಗಿ ಗುರುತಿಸಲಾಯಿತು.

ನಿ.ಪಿ - 18 – ನನ್ನ ತಂದೆಯ ಸೇರಿದ ಬ್ಯಾಂಕ್ ಖಾತೆಯ ವಿವರ

ನಿ.ಪಿ - 19 ಮತ್ತು 20 - ಸದರಿ ನಿ.ಪಿ - 18 ರ ಮುಂದುವರಿದ ದಾಖಲೆ ಎಂದರೆ ದಿನಾಂಕ 21-11-2019 ರಿಂದ ದಿನಾಂಕ 19-01-2020 ರವರೆಗೆ ಬ್ಯಾಂಕ್ ಖಾತೆಯ ವಿವರ

ನಿ.ಪಿ - 21 - ಕೊಯತ್ ರಾಯಭಾರಿ ಕಚೇರಿಯವರು ನನ್ನ ಹೆಸರಿಗೆ ನೀಡಿರುವ ಒಂದು ಧೃಢಿಕರಣ ಪತ್ರ

ಹಾಗಾಗಿ ನನ್ನ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎನ್.ವಿ.ಆರ್ ವಕೀಲರಿಂದ</u> :** ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**